Presidency School of Law

Legal Aid Clinic

ಕಾನೂನು ಸೇವಾ ಚಿಕಿತ್ಸಾಲಯ

# Know Your Rights Fulfil Your Duties

A Legal Awareness Booklet

"The safety of the people shall be the highest law."

— Cicero



PRESIDENCY UNIVERSITY

Presidency School of Law

ಕಾನೂನು ಸೇವಾ ಚಿಕಿತ್ಸಾಲಯ

# ನಿಮ್ಮ ಹಕ್ಕುಗಳನ್ನು ತಿಳಿಯಿರಿ
# ನಿಮ್ಮ ಕರ್ತವ್ಯಗಳನ್ನು ಪಾಲಿಸಿ

## ಕಾನೂನು ಜಾಗೃತಿ ಕೈಪಿಡಿ

"ಪ್ರಜೆಗಳ ಕ್ಷೇಮವೇ ಸರ್ವೋಚ್ಚ ಕಾನೂನು."
— ಸಿಸೆರೋ



## A Word to the Reader

The law exists to protect every person — man, woman, child, farmer, shopkeeper, and daily-wage worker alike. Yet many people in our communities do not know their rights and end up suffering in silence or being taken advantage of by those with money, power, or connections.

This booklet explains ten important areas of Indian law in simple, clear language. Each section explains what the law says, provides the relevant statute or act, tells you what to do if you or someone you know is affected, and gives you contact numbers for help.

You do not need to be educated or wealthy to use the law. The law belongs to everyone. The Constitution of India guarantees every citizen the Right to Equality (Article 14), the Right against Exploitation (Article 23), and the Right to Constitutional Remedies (Article 32) — meaning if your rights are violated, you can go directly to a court to seek justice.

## About Presidency University

Presidency University, Bangalore, is a NAAC 'A' accredited institution, renowned for its commitment to quality education and holistic student development. Established in 2013 by the Presidency Group of Institutions, it is an emerging leading educational institution in India.

## About Presidency School of Law

Presidency School of Law (PSOL), Bengaluru, established in 2015, is a premier institution known for its rigorous and contemporary legal education. It nurtures professionals with competence, integrity, and leadership, offering undergraduate, postgraduate, and doctoral programmes that cater to the evolving demands of the legal profession.

## Free Legal Aid — It is Your Right, Not a Charity

Article 39A of the Constitution of India makes free legal aid a fundamental directive — the state must ensure that no person is denied justice because of poverty or lack of resources. Every district in Karnataka has a District Legal Services Authority (DLSA) that provides free legal advice, free lawyers for court cases, free mediation, and help with drafting legal notices — all free of charge for anyone who qualifies (including women, SC/ST persons, children, and those with annual income below Rs. 3 lakh).

National Legal Services Helpline: 15100 | Karnataka SLSA: 080-22113848 | Lok Adalat: Held every quarter in every district for fast settlement of land, family, and money disputes.

**“An unjust law is no law at all. Know your rights. Use them.”**

## ಓದುಗರಿಗೆ ಒಂದು ಮಾತು

ಕಾನೂನು ಪ್ರತಿಯೊಬ್ಬ ವ್ಯಕ್ತಿಯನ್ನೂ ರಕ್ಷಿಸುತ್ತದೆ, ಗಂಡು, ಹೆಣ್ಣು, ಮಗು, ರೈತ, ಅಂಗಡಿಯವರು, ದಿನಗೂಲಿ ಕಾರ್ಮಿಕರು — ಎಲ್ಲರೂ ಸಮಾನರು.

ಆದರೆ ನಮ್ಮ ಸಮಾಜದಲ್ಲಿ ಹಲವರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿದಿಲ್ಲ. ಹಣ, ಅಧಿಕಾರ, ಅಥವಾ ಪ್ರಭಾವ ಇರುವವರು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಅನೇಕರು ನೋವು ಅನುಭವಿಸುತ್ತಾ ಸುಮ್ಮನಿರುತ್ತಾರೆ.

ಈ ಕೈಪಿಡಿಯಲ್ಲಿ ಭಾರತೀಯ ಕಾನೂನಿನ ಹತ್ತು ಮಹತ್ವದ ವಿಷಯಗಳನ್ನು ಸರಳ, ಸ್ಪಷ್ಟ ಭಾಷೆಯಲ್ಲಿ ವಿವರಿಸಲಾಗಿದೆ.

ಕಾನೂನು ಬಳಸಲು ನೀವು ಶ್ರೀಮಂತರಾಗಿರಬೇಕಾಗಿಲ್ಲ, ಓದಿರಬೇಕಾಗಿಲ್ಲ. ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ಈ ಹಕ್ಕುಗಳನ್ನು ನೀಡಿದೆ:

- ಸಮಾನತೆಯ ಹಕ್ಕು (ಪರಿಚ್ಛೇದ ೧೪)
- ಶೋಷಣೆಯ ವಿರುದ್ಧ ಹಕ್ಕು (ಪರಿಚ್ಛೇದ ೨೩)
- ಸಂವಿಧಾನ ಪರಿಹಾರದ ಹಕ್ಕು (ಪರಿಚ್ಛೇದ ೩೨), ನ್ಯಾಯಕ್ಕಾಗಿ ನೇರ ನ್ಯಾಯಾಲಯಕ್ಕೆ ಹೋಗಬಹುದು

## ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಬಗ್ಗೆ

ಬೆಂಗಳೂರಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು ಎನ್‌ಎಎಸಿ 'ಎ' ಮಾನ್ಯತೆ ಪಡೆದ ಸಂಸ್ಥೆಯಾಗಿದ್ದು, ಗುಣಮಟ್ಟದ ಶಿಕ್ಷಣ ಮತ್ತು ಸಮಗ್ರ ವಿದ್ಯಾರ್ಥಿ ಅಭಿವೃದ್ಧಿಗೆ ತನ್ನ ಬದ್ಧತೆಗೆ ಹೆಸರುವಾಸಿಯಾಗಿದೆ. 2013ರಲ್ಲಿ ಪ್ರೆಸಿಡೆನ್ಸಿ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ಸ್ಥಾಪಿಸಿದ ಇದು ಭಾರತದಲ್ಲಿ ಉದಯೋನ್ಮುಖ ಪ್ರಮುಖ ಶಿಕ್ಷಣ ಸಂಸ್ಥೆಯಾಗಿದೆ.

## ಪ್ರೆಸಿಡೆನ್ಸಿ ಸ್ಕೂಲ್ ಆಫ್ ಲಾ ಬಗ್ಗೆ

ಪ್ರೆಸಿಡೆನ್ಸಿ ಸ್ಕೂಲ್ ಆಫ್ ಲಾ (PSOL), ಬೆಂಗಳೂರು, 2015 ರಲ್ಲಿ ಸ್ಥಾಪಿತವಾದ, ತನ್ನ ಕಠಿಣ ಮತ್ತು ಸಮಕಾಲೀನ ಕಾನೂನು ಶಿಕ್ಷಣಕ್ಕಾಗಿ ಹೆಸರುವಾಸಿಯಾದ ಪ್ರತಿಷ್ಠಿತ ಸಂಸ್ಥೆಯಾಗಿದೆ. ಇದು ಸಾಮರ್ಥ್ಯ, ಸಚ್ಚಾರಿತ್ರ್ಯ ಮತ್ತು ನಾಯಕತ್ವದ ಗುಣಗಳನ್ನು ಹೊಂದಿದ ವೃತ್ತಿಪರರನ್ನು ರೂಪಿಸುತ್ತದೆ ಮತ್ತು ಕಾನೂನು ವೃತ್ತಿಯ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸುವ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಕಾರ್ಯಕ್ರಮಗಳನ್ನು ನೀಡುತ್ತದೆ.

## ಉಚಿತ ಕಾನೂನು ಸಹಾಯ — ನಿಮ್ಮ ಹಕ್ಕು, ಭಿಕ್ಷೆ ಅಲ್ಲ

ಸಂವಿಧಾನದ ಪರಿಚ್ಛೇದ ೩೯A ಉಚಿತ ಕಾನೂನು ಸಹಾಯವನ್ನು ಮೂಲಭೂತ ಆದೇಶವಾಗಿ ಮಾಡಿದೆ — ಬಡತನ ಅಥವಾ ಸಂಪನ್ಮೂಲದ ಕೊರತೆಯಿಂದ ಯಾರೂ ನ್ಯಾಯದಿಂದ ವಂಚಿತರಾಗಬಾರದು.

ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ (DLSA) ಇದೆ. ಅರ್ಹರಿಗೆ ಈ ಎಲ್ಲವೂ ಉಚಿತ: ಉಚಿತ ಕಾನೂನು ಸಲಹೆ, ನ್ಯಾಯಾಲಯ ಪ್ರಕರಣಗಳಿಗೆ ಉಚಿತ ವಕೀಲ, ಉಚಿತ ಮಧ್ಯಸ್ಥಿಕೆ (ಮೀಡಿಯೇಶನ್), ಕಾನೂನು ನೋಟೀಸ್ ಬರೆಯಲು ಸಹಾಯ

ಅರ್ಹರು: ಮಹಿಳೆಯರು, SC/ST ವ್ಯಕ್ತಿಗಳು, ಮಕ್ಕಳು, ವಾರ್ಷಿಕ ಆದಾಯ ₹೩ ಲಕ್ಷಕ್ಕಿಂತ ಕಡಿಮೆ ಇರುವ ಎಲ್ಲರೂ.

ರಾಷ್ಟ್ರೀಯ ಕಾನೂನು ಸಹಾಯ ಸಹಾಯವಾಣಿ: 15100

ಕರ್ನಾಟಕ SLSA: 080-22113848

ಲೋಕ ಅದಾಲತ್: ಜಮೀನು, ಕುಟುಂಬ ಮತ್ತು ಹಣದ ವಿವಾದ ತ್ವರಿತ ಇತ್ಯರ್ಥಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ತ್ರೈಮಾಸಿಕ ನಡೆಯುತ್ತದೆ.

**“ಅನ್ಯಾಯದ ಕಾನೂನು ಕಾನೂನೇ ಅಲ್ಲ. ನಿಮ್ಮ ಹಕ್ಕುಗಳನ್ನು ತಿಳಿಯಿರಿ. ಅವುಗಳನ್ನು ಬಳಸಿ.”**

## 1. POCSO — Protecting Children from Sexual Offences

The Protection of Children from Sexual Offences Act, 2012 (POCSO) is a dedicated law that protects every person below the age of 18 from sexual abuse, exploitation, and harassment. It applies uniformly across all of India regardless of religion, caste, gender, or community.

**What Counts as an Offence Under POCSO?**
POCSO defines offences in very broad terms so that no form of abuse escapes the law.

**Penetrative Sexual Assault (Section 3):** Any form of penetration, by body parts or objects, against a child. Punishment: minimum 20 years, extendable to life imprisonment or death.

**Aggravated Penetrative Sexual Assault (Section 5):** When the offender is a police officer, teacher, family member, armed forces personnel, or when a gang is involved, or when the victim is below 12 years. Punishment: minimum 20 years to death.

**Sexual Assault (Section 7):** Any sexual touching without penetration. Punishment: 3 to 5 years.

**Sexual Harassment (Section 11):** Making sexual comments, showing pornographic material, repeatedly contacting a child online or offline with sexual intent, following a child. Punishment: up to 3 years.

**Using a Child for Pornography (Section 13):** Creating, distributing, or possessing sexual photographs or videos of children. Punishment: up to 5 years for first offence, up to 7 years for repeat.

**Grooming (Section 11(iv)):** Repeatedly following or contacting a child to build trust with the intention of later abusing them. This is now explicitly covered.

**Special Protections for the Child During Trial** Section 23 of POCSO prohibits the media from publishing any information, including the name, school, photograph, neighbourhood, or any identifying detail, about a child victim. Violating this is punishable.

Section 29 creates a presumption of guilt: once basic facts are established, the court presumes the accused is guilty and the burden shifts to the accused to prove their innocence. This is the opposite of the general rule in criminal law and specifically helps child victims. The child cannot be made to confront the accused directly in court. Evi- dence is recorded in a child-friendly setting, often through a magistrate or special camera arrangement.

**-** Remember: A child can never legally consent to sexual activity. Even if the child 'agreed,' the adult is 100% guilty. Age of the victim is always verified from birth certificate or school records, not merely from appearance.

- Helpline / Where to Go: Child Helpline: 1098 | Police: 100 | Women & Child Helpline: 181 | DLSA for compensation support

## ೧. ಪೋಕ್ಸೋ — ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಕಾನೂನು

ಮಕ್ಕಳ ಲೈಂಗಿಕ ಅಪರಾಧಗಳ ರಕ್ಷಣಾ ಕಾಯ್ದೆ, ೨೦೧೨ (POCSO) — ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳಿಗೂ ರಕ್ಷಣೆ ನೀಡುತ್ತದೆ. ಧರ್ಮ, ಜಾತಿ, ಲಿಂಗ ಭೇದವಿಲ್ಲದೆ ಇಡೀ ಭಾರತದಲ್ಲಿ ಅನ್ವಯಿಸುತ್ತದೆ.

**ಯಾವ ಅಪರಾಧಗಳು ಈ ಕಾಯ್ದೆ ಅಡಿ ಬರುತ್ತವೆ?**

• **ಗಂಭೀರ ಲೈಂಗಿಕ ಅತ್ಯಾಚಾರ (ಸೆಕ್ಷನ್ ೩):** ಕನಿಷ್ಠ ೨೦ ವರ್ಷ ಜೈಲು, ಮರಣ ದಂಡನೆಯವರೆಗೂ ಹೋಗಬಹುದು.

• **ಪೊಲೀಸ್, ಶಿಕ್ಷಕ, ಕುಟುಂಬ ಸದಸ್ಯ ಅಪರಾಧ ಮಾಡಿದರೆ (ಸೆಕ್ಷನ್ ೫):** ಕನಿಷ್ಠ ೨೦ ವರ್ಷ — ಮರಣ ದಂಡನೆಯವರೆಗೆ.

• **ಲೈಂಗಿಕ ಸ್ಪರ್ಶ (ಸೆಕ್ಷನ್ ೭):** ೩ ರಿಂದ ೫ ವರ್ಷ ಜೈಲು.

• **ಲೈಂಗಿಕ ಕಿರುಕುಳ (ಸೆಕ್ಷನ್ ೧೧):** ಅಶ್ಲೀಲ ಮಾತು, ಅಶ್ಲೀಲ ಚಿತ್ರ ತೋರಿಸುವುದು, ಆನ್ಲೈನ್ ಕಿರುಕುಳ , ೩ ವರ್ಷದವರೆಗೆ ಜೈಲು.

• **ಮಕ್ಕಳ ಅಶ್ಲೀಲ ಚಿತ್ರ ತಯಾರಿಕೆ/ಹಂಚಿಕೆ (ಸೆಕ್ಷನ್ ೧೩):** ೫ ರಿಂದ ೭ ವರ್ಷ ಜೈಲು.

• **ಮಗುವನ್ನು ನಂಬಿಸಿ ನಂತರ ಅಪರಾಧ ಮಾಡಲು ಸಿದ್ಧತೆ (ಸೆಕ್ಷನ್ ೧೧(iv)):** ಇದು ಈಗ ಸ್ಪಷ್ಟವಾಗಿ ಅಪರಾಧ.

**ಯಾರು ವರದಿ ಮಾಡಬೇಕು? (ಕಡ್ಡಾಯ ವರದ — ಸೆಕ್ಷನ್ ೧೯ ಮತ್ತು ೨೧)**
ಯಾವುದೇ ವಯಸ್ಕ ವ್ಯಕ್ತಿ — ವೈದ್ಯ, ಶಿಕ್ಷಕ, ಅಂಗನವಾಡಿ ಕಾರ್ಯಕರ್ತ, ನರ್ಸ್, ಅಥವಾ ಸಾಮಾನ್ಯ ನಾಗರಿಕ — ಮಗುವಿನ ಮೇಲೆ ಅಪರಾಧ ನಡೆದಿದೆ ಎಂದು ತಿಳಿದರೆ, ಪೊಲೀಸರಿಗೆ ತಿಳಿಸುವುದು ಕಾನೂನಿನ ಕರ್ತವ್ಯ.
ವರದಿ ಮಾಡದಿದ್ದರೆ: ೬ ತಿಂಗಳ ಜೈಲು ಮತ್ತು ದಂಡ. ನಂಬಿ ವರದಿ ಮಾಡಿ ತಪ್ಪಾದರೂ ನಿಮ್ಮನ್ನು ಶಿಕ್ಷಿಸಲಾಗದು.

**ವಿಚಾರಣೆ ಸಮಯದಲ್ಲಿ ಮಗುವಿನ ರಕ್ಷಣೆ**
• ಮಾಧ್ಯಮಗಳು ಮಗುವಿನ ಹೆಸರು, ಫೋಟೋ ಅಥವಾ ಯಾವುದೇ ಮಾಹಿತಿ ಪ್ರಕಟಿಸುವಂತಿಲ್ಲ (ಸೆಕ್ಷನ್ ೨೩).
• ಆರೋಪಿಯೇ ತನ್ನ ಮುಗ್ಧತೆ ಸಾಬೀತು ಮಾಡಬೇಕು — ಮಗು ಮಾಡಬೇಕಾಗಿಲ್ಲ (ಸೆಕ್ಷನ್ ೨೯).
• ಮಗು ಎದುರು ಆರೋಪಿಯನ್ನು ಎದುರಿಸಬೇಕಾಗಿಲ್ಲ. ಸ್ನೇಹಮಯ ವಾತಾವರಣದಲ್ಲಿ ಸಾಕ್ಷ್ಯ ದಾಖಲಿಸಲಾಗುತ್ತದೆ.

ಮಗು ಒಪ್ಪಿದ್ದರೂ ಕಾನೂನಿನ ಪ್ರಕಾರ ಅದು ‘ಒಪ್ಪಿಗೆ’ ಅಲ್ಲ. ವಯಸ್ಕ ವ್ಯಕ್ತಿ ೧೦೦% ತಪ್ಪಿತಸ್ಥ.

ಮಕ್ಕಳ ಸಹಾಯವಾಣಿ: 1098 | ಪೊಲೀಸ್: 100 | ಮಹಿಳೆ ಮತ್ತು ಮಕ್ಕಳ ಸಹಾಯವಾಣಿ: 181

## 2. Cyber Crime Laws — Digital Fraud & Online Harassment

With mobile phones reaching every village, cyber crime has followed closely behind. The Information Technology Act, 2000 (IT Act) and the Bharatiya Nyaya Sanhita, 2023 (BNS) together govern crimes committed using phones, computers, the internet, or digital payment systems.

‘**Digital Arrest’**

You receive a phone or video call from someone claiming to be a CBI officer, police inspector, or court official. They say you are suspected of money laundering, drug trafficking, or a fake SIM card in your name. They demand you stay on a video call for hours ‘digitally arrested’ and pay money to ‘close the case.’

Digital arrest does not exist in Indian law. No real government official will ever arrest you over WhatsApp or Google Meet or demand payment to drop a case. This is pure fraud. Hang up immediately, do not pay anything, and report to 1930.

**OTP Fraud:** Someone calls pretending to be a bank officer, government official, or UIDAI representative and asks for your OTP ‘to verify your account’ or ‘update your Aadhaar.’ The moment you share the OTP, your bank account is emptied. Banks and UIDAI will NEVER ask for your OTP. Section 66C IT Act applies.

**Fake UPI/QR Code Fraud:** A ‘buyer’ sends you a QR code saying ‘scan this to receive payment.’ Scanning a QR code sends money from your account — it does not receive it. Never scan a QR code sent by a stranger to get paid.

**What to Do If You Are a Victim**

Do not pay money, paying once leads to more demands. Save all evidence (screenshots, call recordings, transaction IDs). Report at the National Cyber Crime Reporting Portal: cybercrime.gov.in, or call 1930. Your local police station also accepts complaints, ask for the cyber crime desk. You do not need to be tech-savvy to file a complaint; officers will guide you.

Remember: Never share your OTP, Aadhaar number, bank account details, UPI PIN, or passwords with anyone — not even a person claiming to be from the government, your bank, or the court.

Helpline / Where to Go: Cyber Crime Helpline: 1930 | Online Portal: cybercrime.gov.in | Police: 100

## ೨. ಸೈಬರ್ ಅಪರಾಧ — ಡಿಜಿಟಲ್ ವಂಚನೆ ಮತ್ತು ಆನ್‌ಲೈನ್ ಕಿರುಕುಳ

ಮೊಬೈಲ್ ಫೋನ್ ಎಲ್ಲರ ಕೈಗೂ ಬಂದಿದೆ. ಅದರೊಂದಿಗೆ ಸೈಬರ್ ಅಪರಾಧಗಳೂ ಹೆಚ್ಚಾಗಿವೆ. ಮಾಹಿತಿ ತಂತ್ರಜ್ಞಾನ ಕಾಯ್ದೆ, ೨೦೦೦ ಮತ್ತು ಭಾರತೀಯ ನ್ಯಾಯ ಸಂಹಿತೆ, ೨೦೨೩ ಇವುಗಳನ್ನು ನಿಯಂತ್ರಿಸುತ್ತದೆ.
'ಡಿಜಿಟಲ್ ಅರೆಸ್ಟ್' — ವ್ಯಾಪಕ ವಂಚನೆ

ನಿಮಗೆ CBI ಅಧಿಕಾರಿ, ಪೊಲೀಸ್ ಇನ್ಸ್‌ಪೆಕ್ಟರ್ ಅಥವಾ ನ್ಯಾಯಾಲಯ ಅಧಿಕಾರಿ ಎಂದು ಹೇಳಿ ಕರೆ ಬರಬಹುದು. 'ನಿಮ್ಮ ಹೆಸರಲ್ಲಿ ಅಪರಾಧ ನಡೆದಿದೆ, ವಿಡಿಯೋ ಕಾಲ್‌ನಲ್ಲಿ ಇರಿ' ಎಂದು ಹೆದರಿಸಿ ಹಣ ಕೇಳುತ್ತಾರೆ.

ಭಾರತೀಯ ಕಾನೂನಿನಲ್ಲಿ 'ಡಿಜಿಟಲ್ ಅರೆಸ್ಟ್' ಎಂಬ ವ್ಯವಸ್ಥೆಯೇ ಇಲ್ಲ. ಯಾವ ಸರ್ಕಾರಿ ಅಧಿಕಾರಿಯೂ WhatsApp ಅಥವಾ Google Meet ಮೂಲಕ ಬಂಧಿಸಲಾರರು. ತಕ್ಷಣ ಕರೆ ಕಡಿತಗೊಳಿಸಿ, ಹಣ ಕೊಡಬೇಡಿ, 1930ಕ್ಕೆ ದೂರು ನೀಡಿ.

**ಗ್ರಾಮೀಣ ನಿವಾಸಿಗಳನ್ನು ಗುರಿ ಮಾಡುವ ಸಾಮಾನ್ಯ ವಂಚನೆಗಳು**

• **OTP ವಂಚನೆ:** ಬ್ಯಾಂಕ್ ಅಥವಾ ಆಧಾರ್ ಅಧಿಕಾರಿ ಎಂದು ಹೇಳಿ OTP ಕೇಳುತ್ತಾರೆ. OTP ಹಂಚಿಕೊಂಡರೆ ಬ್ಯಾಂಕ್ ಖಾತೆ ಖಾಲಿ ಆಗುತ್ತದೆ. ಬ್ಯಾಂಕ್ ಮತ್ತು UIDAI ಎಂದಿಗೂ OTP ಕೇಳುವುದಿಲ್ಲ.

• **ನಕಲಿ QR ಕೋಡ್ ವಂಚನೆ:** 'ಈ QR ಕೋಡ್ ಸ್ಕ್ಯಾನ್ ಮಾಡಿ, ಹಣ ಬರುತ್ತದೆ' ಎಂದು ಹೇಳುತ್ತಾರೆ. ಆದರೆ QR ಕೋಡ್ ಸ್ಕ್ಯಾನ್ ಮಾಡಿದರೆ ನಿಮ್ಮ ಹಣ ಹೋಗುತ್ತದೆ, ಬರುವುದಿಲ್ಲ.

• **ನಕಲಿ ಸಾಲ ಅಪ್ಲಿಕೇಶನ್‌ಗಳು:** ದಾಖಲೆ ಇಲ್ಲದೆ ಸಾಲ ಕೊಡುವ ಆ್ಯಪ್‌ಗಳು ನಿಮ್ಮ ಫೋಟೋ ಮತ್ತು ಸಂಪರ್ಕಗಳನ್ನು ಕದ್ದು ಬ್ಲ್ಯಾಕ್‌ಮೇಲ್ ಮಾಡುತ್ತಾರೆ.

• **ವಿವಾಹ/ಪ್ರೇಮ ವಂಚನೆ:** ವಾರಗಳ ಕಾಲ ನಂಬಿಕೆ ಗಳಿಸಿ ಹಣ ಕೇಳುತ್ತಾರೆ. ಇದು ವಂಚನೆ — ಸೆಕ್ಷನ್ ೩೧೮ BNS ಅಡಿ ಅಪರಾಧ.

• **ಉದ್ಯೋಗ ವಂಚನೆ:** ನೌಕರಿ ನೀಡುವ ಮೊದಲು 'ನೋಂದಣಿ ಶುಲ್ಕ' ಕೇಳುತ್ತಾರೆ. ಯಾವ ನಿಜವಾದ ಉದ್ಯೋಗದಾತರೂ ಮೊದಲು ಹಣ ಕೇಳುವುದಿಲ್ಲ.

**ನೀವು ಬಲಿಯಾದರೆ ಏನು ಮಾಡಬೇಕು?**
• ಹಣ ಕೊಡಬೇಡಿ — ಒಮ್ಮೆ ಕೊಟ್ಟರೆ ಮತ್ತೆ ಕೇಳುತ್ತಾರೆ.
• ಸ್ಕ್ರೀನ್‌ಶಾಟ್, ಕರೆ ದಾಖಲೆ, ವಹಿವಾಟು ಸಂಖ್ಯೆ ಉಳಿಸಿಕೊಳ್ಳಿ.
• cybercrime.gov.in ಅಥವಾ 1930ಕ್ಕೆ ದೂರು ನೀಡಿ.

ನಿಮ್ಮ OTP, ಆಧಾರ್ ಸಂಖ್ಯೆ, ಬ್ಯಾಂಕ್ ಮಾಹಿತಿ, UPI PIN ಅಥವಾ ಪಾಸ್‌ವರ್ಡ್ ಯಾರಿಗೂ ಹೇಳಬೇಡಿ — ಸರ್ಕಾರಿ ಅಧಿಕಾರಿ ಎಂದರೂ ಸಹ.

ಸೈಬರ್ ಅಪರಾಧ ಸಹಾಯವಾಣಿ: 1930 | ಆನ್‌ಲೈನ್ ದೂರು: cybercrime.gov.in | ಪೊಲೀಸ್: 100

## 3. Free Consent in Contracts — When Agreements Can Be Challenged

The Indian Contract Act, 1872 governs all agreements, whether written or oral, between people. Every valid contract requires five things: an offer, acceptance, lawful consideration changed), a legal purpose, and most importantly, free consent. Without free consent, the injured party can choose to cancel it in court.

**What Destroys Free Consent? (Sections 15–22)**

**Coercion (Section 15):** Threatening someone with physical harm, criminal prosecution, or detention to make them sign. Example: A moneylender says, 'Sign this land transfer deed or I will have you arrested.' This is coercion — the agreement can be cancelled.

**Undue Influence (Section 16):** Using a position of authority or trust to overpower someone's free will. The law presumes undue influence when a dominant party (doctor, zamindar, employer, religious head, moneylender) gets an unfair benefit from a weaker party. The dominant party must prove the transaction was fair. This is especially important in rural debt relationships.

**Fraud (Section 17):** Actively lying about facts, hiding important information that the other party would want to know, or making promises with no intention of keeping them. Example: A trader sells you a piece of land saying it is agricultural, knowing it is legally forest land.

**Misrepresentation (Section 18):** Making an innocent but incorrect statement that causes the other party to agree. Unlike fraud, there is no dishonest intent — but the contract is still voidable.

**Mistake (Section 20–22):** If both parties were mistaken about an important fact (bilateral mistake of fact), the contract is void from the beginning. If only one party is mistaken (unilateral mistake), the contract generally stands, but courts may still provide relief if the other party took advantage.

Remember: An oral agreement is also a contract. If two witnesses heard the agreement and can testify, it can be enforced. Always try to reduce important agreements to writing and keep your copy safely.

Helpline / Where to Go: DLSA (free legal aid): Every district | Legal Aid Helpline: 15100

## ೩. ಒಪ್ಪಂದದಲ್ಲಿ ಮುಕ್ತ ಒಪ್ಪಿಗೆ — ಒಪ್ಪಂದ ರದ್ದು ಮಾಡಬಹುದಾದ ಸಂದರ್ಭಗಳು

ಭಾರತೀಯ ಒಪ್ಪಂದ ಕಾಯ್ದೆ, ೧೮೭೨ ಎಲ್ಲಾ ಒಪ್ಪಂದಗಳನ್ನು ನಿಯಂತ್ರಿಸುತ್ತದೆ — ಬರೆದಿರಲಿ, ಬಾಯಿ ಮಾತಿನಲ್ಲಿ ಇರಲಿ. ಒಪ್ಪಂದ ಮಾನ್ಯವಾಗಲು ಮುಕ್ತ ಒಪ್ಪಿಗೆ ಅವಶ್ಯಕ.
ಮುಕ್ತ ಒಪ್ಪಿಗೆಯನ್ನು ಯಾವ ಸಂದರ್ಭಗಳು ಹಾಳು ಮಾಡುತ್ತವೆ?

• **ಬಲ ಪ್ರಯೋಗ (ಸೆಕ್ಷನ್ ೧೫):** 'ಸಹಿ ಹಾಕದಿದ್ದರೆ ಬಂಧಿಸುತ್ತೇನೆ' ಎಂದು ಬೆದರಿಸಿ ಸಹಿ ಮಾಡಿಸಿದರೆ — ಆ ಒಪ್ಪಂದ ರದ್ದು ಮಾಡಬಹುದು.

• **ಅನುಚಿತ ಪ್ರಭಾವ (ಸೆಕ್ಷನ್ ೧೬):** ವೈದ್ಯ, ಜಮೀನ್ದಾರ, ಉದ್ಯೋಗದಾತ, ಮೇಲ್ಜಾತಿ ವ್ಯಕ್ತಿ ತಮ್ಮ ಸ್ಥಾನ ಉಪಯೋಗಿಸಿ ದುರ್ಬಲರಿಂದ ಅನ್ಯಾಯದ ಲಾಭ ಪಡೆದರೆ — ಒಪ್ಪಂದ ರದ್ದು ಮಾಡಬಹುದು. ಗ್ರಾಮೀಣ ಸಾಲ ಸಂಬಂಧಗಳಲ್ಲಿ ಇದು ಬಹಳ ಮುಖ್ಯ.

• **ವಂಚನೆ (ಸೆಕ್ಷನ್ ೧೭):** ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿ ಒಪ್ಪಂದ ಮಾಡಿಸಿಕೊಂಡರೆ — ರದ್ದು ಮಾಡಬಹುದು.

• **ತಪ್ಪು ನಿರೂಪಣೆ (ಸೆಕ್ಷನ್ ೧೮):** ತಿಳಿಯದೆ ತಪ್ಪಾದ ಮಾಹಿತಿ ನೀಡಿ ಒಪ್ಪಂದ ಮಾಡಿಸಿಕೊಂಡರೆ — ರದ್ದು ಮಾಡಬಹುದು.

• **ತಪ್ಪು ಗ್ರಹಿಕೆ (ಸೆಕ್ಷನ್ ೨೦-೨೨):** ಇಬ್ಬರೂ ಮುಖ್ಯ ವಿಷಯದಲ್ಲಿ ತಪ್ಪಾಗಿ ಅರ್ಥ ಮಾಡಿಕೊಂಡಿದ್ದರೆ — ಒಪ್ಪಂದ ಮೊದಲಿನಿಂದ ಅಮಾನ್ಯ.

**ಅಸಮಂಜಸ ಒಪ್ಪಂದ ಮತ್ತು ಲೇವಾದೇವಿ ಒಪ್ಪಂದ**
ಅತಿ ಹೆಚ್ಚಿನ ಬಡ್ಡಿ ಒಪ್ಪಂದಗಳನ್ನು ನ್ಯಾಯಾಲಯಗಳು ರದ್ದು ಮಾಡಬಲ್ಲವು — ವಿಶೇಷವಾಗಿ ನಿರಕ್ಷರಿ ಅಥವಾ ಅಸಹಾಯ ವ್ಯಕ್ತಿ ಒಪ್ಪಿಸಿಕೊಂಡಾಗ. ಕರ್ನಾಟಕ ಲೇವಾದೇವಿ ಕಾಯ್ದೆ, ೧೯೬೧ ಬಡ್ಡಿ ದರಕ್ಕೆ ಮಿತಿ ಹಾಕಿದೆ.
ಪ್ರಾಯೋಗಿಕ ಹೆಜ್ಜೆಗಳು
• ಅರ್ಥ ಆಗದ ದಾಖಲೆಗೆ ಎಂದಿಗೂ ಸಹಿ ಅಥವಾ ಹೆಬ್ಬೆರಳು ಒತ್ತಬೇಡಿ.
• ವಿಶ್ವಾಸದ ವ್ಯಕ್ತಿ, ವಕೀಲ ಅಥವಾ DLSA ಪ್ಯಾರಾಲೀಗಲ್ ಅವರಿಂದ ತಿಳಿಸಿ ನಂತರ ಸಹಿ ಹಾಕಿ.
• ಒತ್ತಡದಲ್ಲಿ ಸಹಿ ಹಾಕಿದ್ದರೆ ೩ ವರ್ಷದೊಳಗೆ ವಕೀಲರನ್ನು ಭೇಟಿ ಮಾಡಿ.

ಬಾಯಿ ಮಾತಿನ ಒಪ್ಪಂದವೂ ಕಾನೂನಿನಲ್ಲಿ ಮಾನ್ಯ. ಇಬ್ಬರು ಸಾಕ್ಷಿಗಳಿದ್ದರೆ ನ್ಯಾಯಾಲಯದಲ್ಲಿ ಜಾರಿ ಮಾಡಬಹುದು.

DLSA (ಉಚಿತ ಕಾನೂನು ಸಹಾಯ): ಪ್ರತಿ ಜಿಲ್ಲೆ | ಕಾನೂನು ಸಹಾಯ ಸಹಾಯವಾಣಿ: 15100

## 4. Gift Deeds — Transferring Property as a Gift

A gift is a voluntary, gratuitous transfer of property from one person (the donor) to another (the donee) without any payment or exchange. It is governed by Chapter VII of the Transfer of Property Act, 1882 (Sections 122–129). A gift of immovable property (land, house) must be made by a registered written deed; a gift of movable property (gold, cash, vehicle) can be made by delivery alone.

### Essential Conditions for a Valid Gift

The donor must be the legal owner of the property being gifted.The gift must be made voluntarily, no force, no pressure, no undue influence.
The donee (receiver) must accept the gift during the donor's lifetime. If the donee refuses, there is no gift.
For immovable property: the deed must be in writing, signed, attested by two witnesses, and registered at the Sub-Registrar's office. An unregistered gift deed of immovable property has zero legal effect.

### Stamp Duty and Registration in Karnataka

Gift deeds attract stamp duty in Karnataka. As of current rates, gifts of immovable property to family members (spouse, children, grandchildren, siblings, parents) attract a concessional stamp duty of 1% of the market value (minimum Rs. 500), plus registration charges. Gifts to non-family members attract 5.6% stamp duty on the market value. These rates are subject to revision — check at the Sub-Registrar's office or kaveri.karnataka.gov.in before executing the deed.

### Self-Acquired vs. Ancestral Property — A Critical Difference

A person can freely gift their self-acquired property. However, ancestral property — property inherited from a father, grandfather, or great-grandfather — is jointly owned by all coparceners (male and female Hindu family members by birth under the Hindu Succession Act, as amended in 2005). A single coparcener cannot gift the entire ancestral property without the consent of other coparceners. Doing so can be challenged in court by the other family members.

Caution: A gift deed is not the same as a Will. A Will takes effect only after death. A gift deed transfers the property immediately during the donor's lifetime. Once given, the property is no longer yours — the donee can sell it, mortgage it, or deal with it as they wish, subject to any conditions.

Helpline / Where to Go: Sub-Registrar Office in your Taluk | Tahsildar's office for mutation | Maintenance Tribunal at the SDM/DC office for Senior Citizens Act complaints

## ೪. ದಾನ ಪತ್ರ — ಆಸ್ತಿಯನ್ನು ಉಡುಗೊರೆಯಾಗಿ ನೀಡುವುದು

ಒಬ್ಬ ವ್ಯಕ್ತಿ ಇನ್ನೊಬ್ಬರಿಗೆ ಯಾವುದೇ ಪ್ರತಿಫಲ ಪಡೆಯದೆ ಸ್ವಇಚ್ಛೆಯಿಂದ ತಮ್ಮ ಆಸ್ತಿ ನೀಡುವುದೇ ದಾನ. ಆಸ್ತಿ ಹಸ್ತಾಂತರ ಕಾಯ್ದೆ, ೧೮೮೨ (ಸೆಕ್ಷನ್ ೧೨೨–೧೨೯) ಇದನ್ನು ನಿಯಂತ್ರಿಸುತ್ತದೆ. ದಾನ ಮಾನ್ಯವಾಗಲು ಅವಶ್ಯಕ ಷರತ್ತುಗಳು

• ದಾನ ನೀಡುವವರು ಆ ಆಸ್ತಿಯ ಕಾನೂನಿನ ಮಾಲೀಕರಾಗಿರಬೇಕು.
• ದಾನ ಸ್ವಇಚ್ಛೆಯಿಂದ ನೀಡಬೇಕು — ಒತ್ತಾಯ ಅಥವಾ ಒತ್ತಡ ಇರಬಾರದು.
• ದಾನ ಸ್ವೀಕರಿಸುವವರು ದಾನಿ ಜೀವಿಸಿರುವ ಸಮಯದಲ್ಲಿ ಒಪ್ಪಿಕೊಳ್ಳಬೇಕು.
• ಜಮೀನು/ಮನೆ ದಾನ ಮಾಡಲು: ಬರೆದ ದಾಖಲೆ, ಇಬ್ಬರು ಸಾಕ್ಷಿಗಳ ಸಹಿ ಮತ್ತು ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಕಡ್ಡಾಯ.

### ಕರ್ನಾಟಕದಲ್ಲಿ ಸ್ಟಾಂಪ್ ಡ್ಯೂಟಿ ಮತ್ತು ನೋಂದಣಿ

• ಕುಟುಂಬ ಸದಸ್ಯರಿಗೆ ದಾನ: ಮಾರುಕಟ್ಟೆ ಬೆಲೆಯ ೧% ಸ್ಟಾಂಪ್ ಡ್ಯೂಟಿ (ಕನಿಷ್ಠ ₹೫೦೦).
• ಕುಟುಂಬೇತರರಿಗೆ ದಾನ: ಮಾರುಕಟ್ಟೆ ಬೆಲೆಯ ೫.೬% ಸ್ಟಾಂಪ್ ಡ್ಯೂಟಿ.
• ನೋಂದಣಿ ನಂತರ ಖಾತಾ ವರ್ಗಾವಣೆ (ಮ್ಯುಟೇಶನ್) ಮಾಡದಿದ್ದರೆ ಭವಿಷ್ಯದ ವ್ಯವಹಾರಗಳಲ್ಲಿ ತೊಂದರೆ ಆಗುತ್ತದೆ.

### ಸ್ವಂತ ಆಸ್ತಿ ಮತ್ತು ಪೂರ್ವಿಕ ಆಸ್ತಿ — ಮಹತ್ವದ ವ್ಯತ್ಯಾಸ

ಸ್ವಂತ ಗಳಿಸಿದ ಆಸ್ತಿಯನ್ನು ಮುಕ್ತವಾಗಿ ದಾನ ನೀಡಬಹುದು. ಆದರೆ ಅಜ್ಜ-ಮುತ್ತಜ್ಜನಿಂದ ಬಂದ ಆಸ್ತಿಯನ್ನು ಎಲ್ಲ ಬಾಧ್ಯಸ್ಥರ ಒಪ್ಪಿಗೆ ಇಲ್ಲದೆ ಒಬ್ಬರೇ ದಾನ ನೀಡಲಾಗದು. ೨೦೦೫ರ ತಿದ್ದುಪಡಿಯ ಪ್ರಕಾರ ಮಹಿಳೆಯರಿಗೂ ಸಮಾನ ಹಕ್ಕಿದೆ.

### ದಾನ ಪತ್ರ ರದ್ದು ಮಾಡಬಹುದೇ?

ಸಾಮಾನ್ಯವಾಗಿ ದಾನ ಪತ್ರ ನೋಂದಾಯಿಸಿದ ನಂತರ ಅದನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಇಬ್ಬರೂ ಒಪ್ಪಿದರೆ ಅಥವಾ ಮೊದಲೇ ನಿಗದಿಯಾದ ಷರತ್ತು ಉಲ್ಲಂಘನೆಯಾದರೆ ರದ್ದು ಮಾಡಬಹುದು.

ದಾನ ಪತ್ರ ಮತ್ತು ಉಯಿಲು ಒಂದೇ ಅಲ್ಲ. ದಾನ ಪತ್ರ ತಕ್ಷಣ ಜಾರಿಯಾಗುತ್ತದೆ. ಒಮ್ಮೆ ದಾನ ನೀಡಿದ ಆಸ್ತಿ ನಿಮ್ಮದಲ್ಲ.

ಸಬ್-ರಿಜಿಸ್ಟ್ರಾರ್ ಕಚೇರಿ | ತಹಸೀಲ್ದಾರ್ ಕಚೇರಿ (ಖಾತಾ ವರ್ಗಾವಣೆ) | SDM/DC ಕಚೇರಿ (ಹಿರಿಯ ನಾಗರಿಕ ಕಾಯ್ದೆ)

## 5. Murder and Culpable Homicide — When Killing is a Crime and What Grade

The Bharatiya Nyaya Sanhita, 2023 (BNS) deals with crimes causing death. The law carefully grades offences based on intention, knowledge, and circumstances, because it recognises that not every killing is alike.

**Murder (Section 101, BNS)**
Murder is the intentional causing of death — or causing an injury that the person knows will almost certainly result in death. Punishment: death or life imprisonment, plus fine. Murder is a non-bailable, non-compoundable (cannot be settled privately) offence.
An act is murder even if the victim was not the intended target — for example, if a person plants a bomb to kill A but B dies, it is still murder.

**Culpable Homicide Not Amounting to Murder (Section 100, BNS)**
This covers killings where death was caused with the knowledge that it could result in death, but without a definite intention to kill — for example, a sudden fight where one person strikes too hard. Punishment: up to life imprisonment (if the act was done with the knowledge that it would likely cause death) or up to 10 years (if done without such knowledge but recklessly). Courts carefully examine the circumstances.

**Causing Death by Rash or Negligent Act (Section 106, BNS)**
If a person causes death through negligence or recklessness — without any intention to kill — it is punishable under Section 106. For example, a driver who is drunk and causes a road accident resulting in death can be punished with up to 5 years in prison. If the driver flees the scene without reporting the accident, the punishment increases to 10 years.

**Attempt to Murder (Section 109, BNS)**
Attempting to kill someone — even if the victim survives — is punishable with up to 10 years in prison and a fine. If the attempt causes injury, the punishment can extend to life imprisonment.

Caution: Mob violence, 'community punishment,' or 'village-level justice' for any crime — including theft or alleged misconduct — is itself a serious crime. Those who participate in mob beatings can be charged with attempt to murder, murder, or wrongful restraint, regardless of what the victim allegedly did.

Helpline / Where to Go: Police Emergency: 100 | Distress/Witness Protection: speak to the investigating officer or DLSA

## ೫. ಕೊಲೆ ಮತ್ತು ನರಹತ್ಯೆ — ಯಾವಾಗ, ಎಷ್ಟು ಶಿಕ್ಷೆ?

ಭಾರತೀಯ ನ್ಯಾಯ ಸಂಹಿತೆ, ೨೦೨೩ (BNS) ಮರಣ ಉಂಟು ಮಾಡುವ ಅಪರಾಧಗಳನ್ನು ಉದ್ದೇಶ, ಜ್ಞಾನ ಮತ್ತು ಸಂದರ್ಭಗಳ ಆಧಾರದ ಮೇಲೆ ವಿಂಗಡಿಸುತ್ತದೆ.

**ಕೊಲೆ (ಸೆಕ್ಷನ್ ೧೦೧, BNS)**
ಉದ್ದೇಶಪೂರ್ವಕ ಮರಣ ಉಂಟು ಮಾಡುವುದು ಕೊಲೆ. ಶಿಕ್ಷೆ: ಮರಣ ದಂಡನೆ ಅಥವಾ ಜೀವಾವಧಿ ಜೈಲು + ದಂಡ. ಜಾಮೀನು ನೀಡಲಾಗದ, ರಾಜಿ ಮಾಡಿಕೊಳ್ಳಲಾಗದ ಅಪರಾಧ.

**ಕೊಲೆ ಎಂಬ ಮಟ್ಟಕ್ಕೆ ತಲುಪದ ನರಹತ್ಯೆ (ಸೆಕ್ಷನ್ ೧೦೦, BNS)**
ಖಂಡಿತ ಕೊಲ್ಲಬೇಕು ಎಂಬ ಉದ್ದೇಶ ಇಲ್ಲದೆ, ಮರಣ ಆಗಬಹುದು ಎಂಬ ತಿಳಿವಳಿಕೆಯಲ್ಲಿ ನಡೆಸಿದ ಕೃತ್ಯ. ಶಿಕ್ಷೆ: ಜೀವಾವಧಿ ಜೈಲು ಅಥವಾ ೧೦ ವರ್ಷದವರೆಗೆ.

**ಗುಂಪು ಕೊಲೆ — ಮಾಬ್ ಲಿಂಚಿಂಗ್ (ಸೆಕ್ಷನ್ ೧೦೩(೨), BNS)**
ಐದು ಅಥವಾ ಅದಕ್ಕಿಂತ ಹೆಚ್ಚು ಮಂದಿ ಜಾತಿ, ಧರ್ಮ, ಭಾಷೆ ಆಧಾರದ ಮೇಲೆ ಕೊಲೆ ಮಾಡಿದರೆ — ಗುಂಪಿನ ಪ್ರತಿಯೊಬ್ಬರಿಗೂ ಮರಣ ದಂಡನೆ ಅಥವಾ ಜೀವಾವಧಿ ಜೈಲು. ಒಬ್ಬರೇ ಹೊಡೆದಿದ್ದರೂ ಉಳಿದವರೂ ಶಿಕ್ಷೆ ಅನುಭವಿಸಬೇಕು.

**ನಿರ್ಲಕ್ಷ್ಯದಿಂದ ಮರಣ (ಸೆಕ್ಷನ್ ೧೦೬, BNS)**
ಕೊಲ್ಲಬೇಕು ಎಂಬ ಉದ್ದೇಶ ಇಲ್ಲದೆ ನಿರ್ಲಕ್ಷ್ಯದಿಂದ ಮರಣ ಉಂಟಾದರೆ: ೫ ವರ್ಷ ಜೈಲು. ಕುಡಿದು ವಾಹನ ಓಡಿಸಿ ಅಪಘಾತ ಮಾಡಿ ಓಡಿಹೋದರೆ: ೧೦ ವರ್ಷ ಜೈಲು.
ಖಾಸಗಿ ರಕ್ಷಣೆಯ ಹಕ್ಕು

ಮರಣ, ತೀವ್ರ ಗಾಯ, ಅತ್ಯಾಚಾರ ಅಥವಾ ಸೆರೆಮನೆ ಬೆದರಿಕೆ ಇದ್ದಾಗ ನಿಮ್ಮನ್ನು ಅಥವಾ ಇತರರನ್ನು ರಕ್ಷಿಸಿಕೊಳ್ಳಲು ಬಲ ಪ್ರಯೋಗ ಮಾಡಬಹುದು. ಆದರೆ ಬಳಸಿದ ಬಲ ಅಪಾಯಕ್ಕೆ ತಕ್ಕಂತೆ ಇರಬೇಕು.

ಕಳ್ಳತನ ಅಥವಾ ತಪ್ಪಿನ ಆರೋಪದ ಮೇಲೆ ಗ್ರಾಮ ಮಟ್ಟದ ಶಿಕ್ಷೆ ಅಥವಾ ಮಾಬ್ ಹೊಡೆತ ಸ್ವತಃ ಗಂಭೀರ ಅಪರಾಧ.

ಪೊಲೀಸ್ ತುರ್ತು: 100 | DLSA (ಉಚಿತ ಕಾನೂನು ಸಹಾಯ): 15100

## 6. Sexual Harassment — At Work, In Public, and Online

Sexual harassment is any unwanted conduct of a sexual nature that makes a person feel humiliated, unsafe, or violated. Indian law addresses this through multiple provisions — the POSH Act for the workplace and specific sections of the BNS for public spaces, online platforms, and personal settings.

**Relevant BNS Provisions You Should Know**

**Section 74 —** Assault or Criminal Force to Outrage Modesty: Any person who assaults or uses criminal force on a woman with the intention of outraging her modesty faces up to 2 years in prison. If the act is committed in the evening or at night (between 6 PM and 6 AM), the punishment is enhanced to up to 5 years.

**Section 75 —** Sexual Harassment: Making sexually coloured remarks, showing pornographic material, making sexual gestures, or demanding sexual favours is punishable with up to 3 years for the first offence. Repeat offenders face up to 5 years.

**Section 76 —** Assault or Force with Intent to Disrobe: Forcing or attempting to force a woman to undress is punishable with 3 to 7 years in prison. If done in public, the punishment is enhanced.

**POSH Act — At the Workplace**

The Sexual Harassment of Women at Workplace (Prevention, Prohibition and Redressal) Act, 2013 (POSH Act) applies to all workplaces with 10 or more employees — including factories, farms, construction sites, domestic households where workers are employed, MNREGA worksites, and roadside eateries.

A domestic worker (a woman employed in a home as a cook, cleaner, or caretaker) is explicitly protected. The employer of the household is treated as the ‘employer’ under the Act.

The complainant is protected from retaliation — dismissal, demotion, or transfer on account of filing a complaint is itself an offence under the POSH Act.

Remember: Sexual harassment at work is not a personal matter to be resolved quietly. Reporting to the ICC or LCC is a legal right. Employers who try to suppress complaints or threaten complainants can be penalised and fined up to Rs. 50,000 under the POSH Act.

Helpline / Where to Go: Women’s Helpline: 181 | One Stop Centre: 181 | Police: 100 | Karnataka POSH Helpline: contact KWCD at your district

## ೬. ಲೈಂಗಿಕ ಕಿರುಕುಳ — ಕೆಲಸದ ಸ್ಥಳ, ಸಾರ್ವಜನಿಕ ಸ್ಥಳ ಮತ್ತು ಆನ್‌ಲೈನ್

ಲೈಂಗಿಕ ಕಿರುಕುಳ ಎಂದರೆ ಯಾವುದೇ ಅನಪೇಕ್ಷಿತ ಲೈಂಗಿಕ ವರ್ತನೆ. ಭಾರತೀಯ ನ್ಯಾಯ ಸಂಹಿತೆ ಮತ್ತು POSH ಕಾಯ್ದೆ ರಕ್ಷಣೆ ನೀಡುತ್ತವೆ.

### BNS ಅಡಿ ಮಹತ್ವದ ಸೆಕ್ಷನ್‌ಗಳು

• ಸೆಕ್ಷನ್ ೭೪ — ಮಾನಭಂಗ: ಮಹಿಳೆಯ ಮೇಲೆ ಅಕ್ರಮ ಬಲ ಪ್ರಯೋಗ: ೨ ವರ್ಷ ಜೈಲು. ರಾತ್ರಿ ೬ ರಿಂದ ಬೆಳಿಗ್ಗೆ ೬ ರ ನಡುವೆ: ೫ ವರ್ಷ.
• ಸೆಕ್ಷನ್ ೭೫ — ಲೈಂಗಿಕ ಕಿರುಕುಳ: ಅಶ್ಲೀಲ ಮಾತು, ಸನ್ನೆ, ಒತ್ತಡ: ೩ ವರ್ಷ; ಪುನರಾವರ್ತಿತ: ೫ ವರ್ಷ.
• ಸೆಕ್ಷನ್ ೭೭ — ಗೂಢಾಚಾರಿ: ಬಾತ್‌ರೂಮ್ ಅಥವಾ ಖಾಸಗಿ ಕೋಣೆಯಲ್ಲಿ ಗುಪ್ತ ಕ್ಯಾಮೆರಾ: ೧–೩ ವರ್ಷ; ಪುನರಾವರ್ತಿತ: ೩–೭ ವರ್ಷ.
• ಸೆಕ್ಷನ್ ೭೮ — ಹಿಂಬಾಲಿಕೆ (ಸ್ಟಾಕಿಂಗ್): ಮಹಿಳೆ ನಿರಾಕರಿಸಿದ ನಂತರ ಮತ್ತೆ ಸಂಪರ್ಕ ಮಾಡುವುದು: ೩–೫ ವರ್ಷ.
• ಸೆಕ್ಷನ್ ೧೨೪ — ಆ್ಯಸಿಡ್ ದಾಳಿ: ಕನಿಷ್ಠ ೧೦ ವರ್ಷ — ಜೀವಾವಧಿ. ರಾಜ್ಯ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಬೇಕು.

### ಕೆಲಸದ ಸ್ಥಳದಲ್ಲಿ POSH ಕಾಯ್ದೆ

ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ ತಡೆ ಕಾಯ್ದೆ, ೨೦೧೩ (POSH) — ೧೦ ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರಿರುವ ಎಲ್ಲ ಕಡೆ ಅನ್ವಯ: ಕಾರ್ಖಾನೆ, ಜಮೀನು, ಮನೆ ಕೆಲಸ, MNREGA ಕೆಲಸದ ತಾಣ.
• ಪ್ರತಿ ಸಂಸ್ಥೆಯಲ್ಲಿ ಆಂತರಿಕ ದೂರು ಸಮಿತಿ (ICC) ಕಡ್ಡಾಯ — ಮಹಿಳಾ ಅಧ್ಯಕ್ಷೆ ಸೇರಿ.
• ಕಡಿಮೆ ಕಾರ್ಮಿಕರಿದ್ದರೆ: ಜಿಲ್ಲಾ ಕಲೆಕ್ಟರ್ ನೇಮಿಸಿದ ಸ್ಥಳೀಯ ದೂರು ಸಮಿತಿ (LCC)ಗೆ ದೂರು ನೀಡಿ.
• ದೂರು ನೀಡಿದ ಕಾರಣಕ್ಕೆ ವಜಾ ಅಥವಾ ಶಿಕ್ಷೆ ನೀಡಿದರೆ POSH ಕಾಯ್ದೆ ಅಡಿ ₹೫೦,೦೦೦ ದಂಡ.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ವೈಯಕ್ತಿಕ ವಿಷಯ ಅಲ್ಲ. ದೂರು ನೀಡುವುದು ನಿಮ್ಮ ಕಾನೂನಿನ ಹಕ್ಕು.

ಮಹಿಳೆಯರ ಸಹಾಯವಾಣಿ: 181 | ಒಂದು ನಿಲ್ದಾಣ ಕೇಂದ್ರ: 181 | ಪೊಲೀಸ್: 100

## 7. Arrest and Bail - Your Rights Before, During, and After Arrest

Arrest is one of the most frightening experiences a person or family can face. However, the Bharatiya Nagarik Suraksha Sanhita, 2023 (BNSS) and the Constitution of India give every arrested person powerful rights. Knowing these rights can be the difference between justice and injustice.

**Section 35 BNSS — Notice Before Arrest (Previously Section 41A CrPC)**
For offences where the maximum punishment is less than 7 years in prison, the police cannot straightaway arrest a person. They must first issue a written notice asking the person to appear at the police station. If the person cooperates, no arrest is made. This prevents unnecessary arrest for minor matters. Ignoring the notice, however, gives police the right to arrest.

**Rights at the Time of Arrest**
Right to Know the Reason: The police must clearly tell you why you are being arrested and show you the arrest warrant if there is one. Section 47 BNSS requires the grounds of arrest to be communicated in writing.

**Bailable vs. Non-Bailable Offences**
Bailable offences are less serious crimes where the accused has a right to get bail from the police station itself — no court appearance needed. The police must grant bail for bailable offences once the accused offers surety. Non-bailable offences are serious crimes (murder, rape, robbery) where bail can only be granted by a Magistrate or court, not the police. A court considers the seriousness of the offence, the accused's criminal history, flight risk, and risk to witnesses before granting or denying bail.

**Zero FIR and e-FIR**
You can now file an FIR at any police station in the country, regardless of where the crime occurred. This is called a Zero FIR. The receiving station then transfers the FIR to the appropriate station. You can also file an e-FIR online at the Karnataka Police portal for certain offences. If a police station refuses to register your FIR, you can approach the Superintendent of Police or file a complaint before the Magistrate under Section 175 BNSS.

Remember: If you or a family member is held by police beyond 24 hours without a Magistrate's order, file a Habeas Corpus writ petition immediately in the nearest High Court. The High Court is required to hear it urgently. Contact the DLSA for free legal help with this.

Helpline / Where to Go: DLSA Free Legal Aid: 15100 | Karnataka SLSA: 080-22113848 | Police Complaint: 100 | SP's Office for FIR complaints

**೭. ಬಂಧನ ಮತ್ತು ಜಾಮೀನು — ಬಂಧನಕ್ಕೆ ಮೊದಲು, ಸಮಯದಲ್ಲಿ ಮತ್ತು ನಂತರ ನಿಮ್ಮ ಹಕ್ಕುಗಳು**

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, ೨೦೨೩ (BNSS) ಮತ್ತು ಸಂವಿಧಾನ ಪ್ರತಿ ಬಂಧಿತ ವ್ಯಕ್ತಿಗೂ ಶಕ್ತಿಶಾಲಿ ಹಕ್ಕುಗಳನ್ನು ನೀಡಿವೆ.

**ಸೆಕ್ಷನ್ ೩೫ BNSS — ಬಂಧನಕ್ಕೆ ಮೊದಲು ನೋಟೀಸ್**

೭ ವರ್ಷಕ್ಕಿಂತ ಕಡಿಮೆ ಶಿಕ್ಷೆಯ ಅಪರಾಧಕ್ಕೆ ಪೊಲೀಸರು ನೇರ ಬಂಧನ ಮಾಡಲಾಗದು. ಮೊದಲು ಲಿಖಿತ ನೋಟೀಸ್ ಕಳಿಸಬೇಕು. ಸಹಕರಿಸಿದರೆ ಬಂಧನ ಇಲ್ಲ.

**ಬಂಧನ ಸಮಯದಲ್ಲಿ ಹಕ್ಕುಗಳು**

• **ಕಾರಣ ತಿಳಿಯುವ ಹಕ್ಕು:** ಪೊಲೀಸರು ಬಂಧನದ ಕಾರಣ ಲಿಖಿತವಾಗಿ ತಿಳಿಸಬೇಕು.
· ಕುಟುಂಬಕ್ಕೆ ತಿಳಿಸುವ ಹಕ್ಕು: ನಿಮ್ಮ ಒಬ್ಬ ಪರಿಚಯಸ್ಥರಿಗೆ ತಕ್ಷಣ ತಿಳಿಸಬಹುದು (ಸೆಕ್ಷನ್ ೩೫(೨)).
• **ವಕೀಲರ ಹಕ್ಕು:** ವಕೀಲರನ್ನು ಸಂಪರ್ಕಿಸುವ ಹಕ್ಕು ಸಂವಿಧಾನ ನೀಡಿದೆ (ಪರಿಚ್ಛೇದ ೨೨). ಹಣ ಇಲ್ಲದಿದ್ದರೆ DLSA ಉಚಿತ ವಕೀಲ ನೀಡುತ್ತದೆ.
• **ಮೌನ ಹಕ್ಕು:** ಸ್ವಯಂ ವಿರುದ್ಧ ಸಾಕ್ಷ್ಯ ನೀಡಲು ಒತ್ತಾಯಿಸಲಾಗದು (ಪರಿಚ್ಛೇದ ೨೦(೩)). ವಕೀಲರಿಲ್ಲದೆ ಉತ್ತರ ನೀಡಬೇಕಾಗಿಲ್ಲ.
• **ಹಿಂಸಾಚಾರ ನಿಷೇಧ:** ಪೊಲೀಸ್ ತನಿಖಾ ಅಧಿಕಾರಿ ಮುಂದೆ ಮಾಡಿದ ತಪ್ಪೊಪ್ಪಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಸ್ವೀಕರಿಸಲಾಗದು.
• **ವೈದ್ಯಕೀಯ ಪರೀಕ್ಷೆ:** ಬಂಧನದ ೨೪ ಗಂಟೆಯೊಳಗೆ ವೈದ್ಯರಿಂದ ಪರೀಕ್ಷೆ ಕಡ್ಡಾಯ.
• **ಮ್ಯಾಜಿಸ್ಟ್ರೇಟ್ ಮುಂದೆ ಹಾಜರು:** ೨೪ ಗಂಟೆಯೊಳಗೆ ನ್ಯಾಯಾಧೀಶರ ಮುಂದೆ ನಿಲ್ಲಿಸಬೇಕು.

**ಜಾಮೀನು ಸಿಗುವ ಮತ್ತು ಸಿಗದ ಅಪರಾಧಗಳು**

· ಜಾಮೀನು ಸಿಗುವ ಅಪರಾಧ: ಕಡಿಮೆ ಗಂಭೀರ ಅಪರಾಧ — ಪೊಲೀಸ್ ಠಾಣೆಯಲ್ಲೇ ಜಾಮೀನು ಸಿಗುತ್ತದೆ.
· ಜಾಮೀನು ಸಿಗದ ಅಪರಾಧ: ಕೊಲೆ, ಅತ್ಯಾಚಾರ, ದರೋಡೆ — ನ್ಯಾಯಾಲಯ ಮಾತ್ರ ಜಾಮೀನು ನೀಡಬಲ್ಲದು.

**ಝೀರೋ FIR ಮತ್ತು e-FIR**

ಅಪರಾಧ ನಡೆದ ಸ್ಥಳ ಯಾವ ಠಾಣೆ ವ್ಯಾಪ್ತಿ ಎಂದು ತಿಳಿಯದಿದ್ದರೂ ಯಾವ ಠಾಣೆಯಲ್ಲಿ ಬೇಕಾದರೂ FIR ದಾಖಲಿಸಬಹುದು — ಇದನ್ನು ಝೀರೋ FIR ಎಂದು ಕರೆಯುತ್ತಾರೆ. ಕರ್ನಾಟಕ ಪೊಲೀಸ್ ಪೋರ್ಟಲ್‌ನಲ್ಲಿ e-FIR ಕೂಡ ಸಲ್ಲಿಸಬಹುದು.

೨೪ ಗಂಟೆಯ ನಂತರ ಮ್ಯಾಜಿಸ್ಟ್ರೇಟ್ ಆದೇಶ ಇಲ್ಲದೆ ಹಿಡಿದಿಟ್ಟಿದ್ದರೆ ಹೈಕೋರ್ಟ್‌ನಲ್ಲಿ ಬಂದಿ ಪ್ರತ್ಯಕ್ಷ (Habeas Corpus) ಅರ್ಜಿ ಸಲ್ಲಿಸಿ.

DLSA ಉಚಿತ ಕಾನೂನು ಸಹಾಯ: 15100 | ಕರ್ನಾಟಕ SLSA: 080-22113848 | ಪೊಲೀಸ್: 100

## 8. Dowry — The Law, Stridhan, and What You Can Do

Dowry is the demand or transfer of money, property, gold, jewellery, or any other valuable asset from the bride's family to the groom or his family in connection with a marriage. The Dowry Prohibition Act, 1961 makes demanding, giving, or taking dowry a criminal offence.

**Cruelty for Dowry (BNS Section 84)**
When a husband or his relatives harass, beat, humiliate, or coerce a woman into meeting dowry demands after marriage, this is cruelty under Section 84 BNS. Punishment: up to 3 years in prison and a fine. This section is widely used alongside the Dowry Prohibition Act when complaints are filed.

**Dowry Death (BNS Section 80)**
If a woman dies within 7 years of marriage — due to burns, bodily injury, or in any suspicious circumstance — and it is shown that she was subjected to cruelty or harassment in connection with dowry demands before her death, it is treated as Dowry Death. The husband and in-laws are presumed guilty and must prove their innocence. Punishment: minimum 7 years in prison, extendable to life imprisonment.

**Stridhan — A Woman's Absolute Property**
Stridhan is a woman's exclusive property: all gifts given to her before, during, or after the wedding — jewellery, cash, clothes, property — by her parents, relatives, or by the husband's family. Stridhan legally belongs only to the woman. If the husband or in-laws take away or misappropriate a woman's stridhan, it is criminal breach of trust under Section 316 BNS, punishable with up to 3 years in prison. The woman can file a police complaint or a civil suit to recover her stridhan at any time during or after the marriage. Even after divorce, she is entitled to the full return of her stridhan.

**What Should a Woman or Her Family Do?**
Document all demands — save WhatsApp messages, voice messages, emails, or letters that show demands. Keep a list and valuation of all stridhan. If harassment begins, the woman can file an FIR at any police station under the Dowry Prohibition Act, Section 84 BNS, and/or the Domestic Violence Act simultaneously. She does not need her husband's or in-laws' permission to file. A Dowry Prohibition Officer (appointed at the district level) can also assist in investigation.

Remember: Giving dowry does not protect you from the law — both the giver and the receiver commit an offence. But victims who file complaints are generally protected, because the law recognises that most people give dowry under duress.

Helpline / Where to Go: Women's Helpline: 181 | Police: 100 | Mahila Police Station in your district | MEA NRI Cell: +91-11-49014103

## ೮. ವರದಕ್ಷಿಣೆ — ಕಾನೂನು, ಸ್ತ್ರೀಧನ, ಮತ್ತು ಮಾಡಬೇಕಾದದ್ದು

ಮದುವೆ ಸಂಬಂಧದಲ್ಲಿ ವಧುವಿನ ಕುಟುಂಬದಿಂದ ವರ ಅಥವಾ ಅವರ ಕುಟುಂಬಕ್ಕೆ ಹಣ, ಆಸ್ತಿ ಅಥವಾ ಚಿನ್ನ ನೀಡುವುದೇ ವರದಕ್ಷಿಣೆ. ವರದಕ್ಷಿಣೆ ನಿಷೇಧ ಕಾಯ್ದೆ, ೧೯೬೧ ಇದನ್ನು ಸ್ವೀಕರಿಸುವುದು, ನೀಡುವುದು ಮತ್ತು ಕೇಳುವುದನ್ನು ಅಪರಾಧ ಮಾಡಿದೆ.

**ಪ್ರಮುಖ ಅಪರಾಧಗಳು ಮತ್ತು ಶಿಕ್ಷೆಗಳು**

· ವರದಕ್ಷಿಣೆ ಕೇಳುವುದು (ಸೆಕ್ಷನ್ ೪): ಕನಿಷ್ಠ ೬ ತಿಂಗಳು (೨ ವರ್ಷದವರೆಗೆ) + ₹೧೦,೦೦೦ ದಂಡ.

· ವರದಕ್ಷಿಣೆ ನೀಡುವುದು/ಸ್ವೀಕರಿಸುವುದು (ಸೆಕ್ಷನ್ ೩): ಕನಿಷ್ಠ ೫ ವರ್ಷ + ₹೧೫,೦೦೦ ಅಥವಾ ವರದಕ್ಷಿಣೆ ಮೌಲ್ಯ (ಯಾವುದು ಹೆಚ್ಚೋ ಅದು) ದಂಡ.

**ವರದಕ್ಷಿಣೆ ಕ್ರೌರ್ಯ (BNS ಸೆಕ್ಷನ್ ೮೪)**

ಮದುವೆ ನಂತರ ಗಂಡ ಅಥವಾ ಅವರ ಕುಟುಂಬ ವರದಕ್ಷಿಣೆ ಒತ್ತಾಯ ಮಾಡಿ ಹಿಂಸಿಸಿದರೆ: ೩ ವರ್ಷ ಜೈಲು + ದಂಡ.

**ವರದಕ್ಷಿಣೆ ಮರಣ (BNS ಸೆಕ್ಷನ್ ೮೦)**

ಮದುವೆಯ ೭ ವರ್ಷದೊಳಗೆ ಮಹಿಳೆ ಶಂಕಾಸ್ಪದ ಸಾವಿಗೀಡಾದರೆ ಮತ್ತು ವರದಕ್ಷಿಣೆ ಕಿರುಕುಳ ಇದ್ದರೆ — ಗಂಡ ಮತ್ತು ಮಾವ ಕಡೆಯವರೇ ತಮ್ಮ ನಿರ್ದೋಷಿತ್ವ ಸಾಬೀತು ಮಾಡಬೇಕು. ಶಿಕ್ಷೆ: ಕನಿಷ್ಠ ೭ ವರ್ಷ — ಜೀವಾವಧಿ.

**ಸ್ತ್ರೀಧನ — ಮಹಿಳೆಯ ಸ್ವಂತ ಆಸ್ತಿ**

ಮದುವೆ ಮೊದಲು, ಸಮಯದಲ್ಲಿ ಅಥವಾ ನಂತರ ಮಹಿಳೆಗೆ ತನ್ನ ಕಡೆಯವರಿಂದ ಅಥವಾ ಗಂಡನ ಕಡೆಯವರಿಂದ ದೊರೆತ ಉಡುಗೊರೆಗಳು — ಚಿನ್ನ, ಹಣ, ಬಟ್ಟೆ, ಆಸ್ತಿ — ಎಲ್ಲವೂ ಮಹಿಳೆಯ ಸ್ತ್ರೀಧನ. ಗಂಡ ಮತ್ತು ಮಾವ ಕಡೆಯವರಿಗೆ ಇದರ ಮೇಲೆ ಯಾವ ಹಕ್ಕೂ ಇಲ್ಲ.
ಸ್ತ್ರೀಧನ ಕಸಿದುಕೊಂಡರೆ: ಸೆಕ್ಷನ್ ೩೧೬ BNS ಅಡಿ ೩ ವರ್ಷ ಜೈಲು. ವಿಚ್ಛೇದನ ನಂತರವೂ ಸ್ತ್ರೀಧನ ಹಿಂದಿರುಗಿಸಬೇಕು.

**ಮಾಡಬೇಕಾದದ್ದು**

· ಒತ್ತಾಯ ಮಾಡಿದ WhatsApp ಸಂದೇಶ, ಫೋನ್ ರೆಕಾರ್ಡಿಂಗ್, ಪತ್ರಗಳನ್ನು ಉಳಿಸಿಕೊಳ್ಳಿ.

· ಎಲ್ಲ ಸ್ತ್ರೀಧನದ ಪಟ್ಟಿ ಮತ್ತು ಮೌಲ್ಯ ದಾಖಲಿಸಿಕೊಳ್ಳಿ.

· ಯಾವ ಪೊಲೀಸ್ ಠಾಣೆಯಲ್ಲಿ ಬೇಕಾದರೂ FIR ದಾಖಲಿಸಬಹುದು — ಗಂಡ ಅಥವಾ ಮಾವ ಒಪ್ಪಿಗೆ ಬೇಕಾಗಿಲ್ಲ.

ವರದಕ್ಷಿಣೆ ನೀಡಿದ ಮಾತ್ರಕ್ಕೆ ಅಪರಾಧ ಮಾಡಿದ ಹಾಗೆ — ಆದರೆ ಒತ್ತಡದಲ್ಲಿ ನೀಡಿದ ಬಲಿಪಶು ದೂರು ನೀಡಲು ಸಾಮಾನ್ಯವಾಗಿ ರಕ್ಷಣೆ ಇದೆ.

ಮಹಿಳೆಯರ ಸಹಾಯವಾಣಿ: 181 | ಪೊಲೀಸ್: 100 | ಮಹಿಳಾ ಪೊಲೀಸ್ ಠಾಣೆ

## 9. Domestic Violence — Your Rights, Relief, and Related Laws

The Protection of Women from Domestic Violence Act, 2005 (PWDVA) is a civil law that gives women fast, comprehensive relief without requiring them to go through a criminal trial first. It defines domestic violence far more broadly than most people realise.

**Four Types of Domestic Violence Recognised by Law**

**Physical Abuse:** Hitting, slapping, kicking, biting, burning, or any act that causes bodily pain or endangers health.

**Emotional and Verbal Abuse:** Constantly insulting a woman's character, intelligence, or appearance; humiliating her in front of others; making threats against her or her children; forcing her to get an abortion; preventing her from meeting family or friends.

**Sexual Abuse:** Forcing sexual acts, forcing her to watch or participate in pornography, forcing her to undress in front of others, or any act that violates her dignity sexually — even within marriage.

**Economic Abuse:** Not providing money for basic necessities (food, medicine, school fees); disposing of her property without consent; taking away her salary or income; preventing her from taking up employment.

**What Relief Can a Court Give?**

**Protection Order:** The Magistrate can order the abuser to stop all acts of violence, not contact the woman (including via phone or social media), and stay away from the woman's home, workplace, and children's school.

**Residence Order:** Even if the house belongs to the husband or in-laws, the woman has the right to live in the shared household. The husband cannot throw her out.

**Monetary Relief:** The court can direct the husband to pay for medical expenses, loss of earnings, and other financial losses caused by the violence.

**Maintenance Order (Section 20 PWDVA)**: Monthly maintenance for the woman and her children can be ordered as part of the DV case itself — this is faster than a separate maintenance case.

Remember: You do not need visible injuries to file a complaint. Threats, emotional torture, economic control, and a single serious act of violence are all sufficient. Courts have held that 'cruelty' does not require repeated acts — a single grave incident can suffice.

Helpline / Where to Go: Women's Helpline (24x7): 181 | One Stop Centre: 181 | Police: 100 | Protection Officer: District WCDD office | Sakhi Centres at district hospitals

## ೯. ಗೃಹ ಹಿಂಸೆ — ನಿಮ್ಮ ಹಕ್ಕುಗಳು, ಪರಿಹಾರ ಮತ್ತು ಸಂಬಂಧಿತ ಕಾನೂನುಗಳು

ಮಹಿಳೆಯರ ಗೃಹ ಹಿಂಸೆ ರಕ್ಷಣಾ ಕಾಯ್ದೆ, ೨೦೦೫ (PWDVA) ಒಂದು ನಾಗರಿಕ ಕಾನೂನು. ಮೊದಲು ಕ್ರಿಮಿನಲ್ ವಿಚಾರಣೆ ಇಲ್ಲದೆ ತ್ವರಿತ ಮತ್ತು ಸಮಗ್ರ ಪರಿಹಾರ ನೀಡುತ್ತದೆ.

### ಕಾನೂನಿನ ಪ್ರಕಾರ ನಾಲ್ಕು ವಿಧದ ಗೃಹ ಹಿಂಸೆ

- ದೈಹಿಕ ದುರ್ಬಳಕೆ: ಹೊಡೆಯುವುದು, ತಳ್ಳುವುದು, ಕಡಿಯುವುದು, ಸುಡುವುದು.
- ಮಾನಸಿಕ/ಮೌಖಿಕ ದುರ್ಬಳಕೆ: ಅವಮಾನ, ಬೆದರಿಕೆ, ಕುಟುಂಬದಿಂದ ಬೇರ್ಪಡಿಸುವುದು, ಗರ್ಭಪಾತಕ್ಕೆ ಒತ್ತಡ.
- ಲೈಂಗಿಕ ದುರ್ಬಳಕೆ: ಒತ್ತಾಯದ ಲೈಂಗಿಕ ಸಂಬಂಧ — ಮದುವೆ ಒಳಗೇ ಆದರೂ ಅಪರಾಧ.
- ಆರ್ಥಿಕ ದುರ್ಬಳಕೆ: ಊಟ, ಔಷಧ, ಶಾಲೆ ಖರ್ಚಿಗೆ ಹಣ ನಿರಾಕರಿಸುವುದು; ಸಂಬಳ ಕಸಿದುಕೊಳ್ಳುವುದು.

### ಯಾರಿಗೆ ರಕ್ಷಣೆ ಇದೆ? (ಸೆಕ್ಷನ್ ೨(a))

ಕಾನೂನಿನ ಮದುವೆ ಆಗಿರಲಿ, ಸಂಪ್ರದಾಯದ ಮದುವೆ ಆಗಿರಲಿ, ಲಿವ್-ಇನ್ ಪಾಲುದಾರ ಆಗಿರಲಿ, ತಾಯಿ, ಸೋದರಿ, ಮಗಳು, ಅಥವಾ ಮನೆಯಲ್ಲಿ ವಾಸ ಮಾಡಿದ ಯಾವ ಮಹಿಳೆಯಾದರೂ ಈ ಕಾಯ್ದೆ ಅಡಿ ರಕ್ಷಣೆ ಪಡೆಯಬಹುದು.

### ನ್ಯಾಯಾಲಯ ನೀಡಬಹುದಾದ ಪರಿಹಾರ

- ರಕ್ಷಣಾ ಆದೇಶ: ಹಿಂಸೆ ನಿಲ್ಲಿಸಲು, ಸಂಪರ್ಕ ತಡೆಯಲು ಆದೇಶ.
- ವಸತಿ ಆದೇಶ: ಮನೆ ಗಂಡನ ಹೆಸರಲ್ಲಿ ಇದ್ದರೂ ಮಹಿಳೆ ಅದರಲ್ಲಿ ಇರಬಹುದು — ಹೊರಹಾಕಲಾಗದು.
- ಹಣಕಾಸು ಪರಿಹಾರ: ವೈದ್ಯಕೀಯ ಖರ್ಚು, ಆದಾಯ ನಷ್ಟ ಪಡೆಯಬಹುದು.
- ಜೀವನಾಂಶ ಆದೇಶ (ಸೆಕ್ಷನ್ ೨೦): ತ್ವರಿತ ಜೀವನಾಂಶ — ಪ್ರತ್ಯೇಕ ಕೇಸ್ ಬೇಕಾಗಿಲ್ಲ.

### ರಕ್ಷಣಾ ಅಧಿಕಾರಿ — ನಿಮ್ಮ ಮೊದಲ ಸಂಪರ್ಕ

ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ PWDVA ಅಡಿ ರಕ್ಷಣಾ ಅಧಿಕಾರಿ ಇದ್ದಾರೆ. ಜಿಲ್ಲಾ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಚೇರಿಯಲ್ಲಿ ಭೇಟಿ ಮಾಡಿ. ಇವರ ಸೇವೆ ಉಚಿತ.

ಗಾಯದ ಗುರುತಿರದಿದ್ದರೂ ದೂರು ನೀಡಬಹುದು. ಬೆದರಿಕೆ, ಮಾನಸಿಕ ಚಿತ್ರಹಿಂಸೆ ಒಂದೇ ಬಾರಿ ಆದರೂ ಸಾಕು.

ಮಹಿಳೆಯರ ಸಹಾಯವಾಣಿ (24x7): 181 | ಒಂದು ನಿಲ್ದಾಣ ಕೇಂದ್ರ: 181 | ಪೊಲೀಸ್: 100 | ಸಖಿ ಕೇಂದ್ರ (ಜಿಲ್ಲಾ ಆಸ್ಪತ್ರೆ)

## 10. Registration and Licences for Shops and Small Businesses

Running a business however small without proper registration and licences exposes you to fines, closure, and even arrest. More importantly, being registered opens the door to government loans, subsidies, and legal protections you would otherwise miss out on.

**Karnataka Shops and Commercial Establishments Act, 1961**

Every shop, restaurant, hotel, petrol station, office, or commercial establishment in Karnataka must register under this Act within 30 days of opening. Registration is done at the Labour Department or through the Seva Sindhu portal. The registration certificate must be displayed at the shop entrance.

**FSSAI Licence — Mandatory for All Food Businesses**

The Food Safety and Standards Authority of India (FSSAI) licence is compulsory for anyone who sells, manufactures, stores, transports, or distributes food. This includes kirana stores, tea stalls, hotels, dabba services, sweet shops, and even home-based food businesses with a turnover above Rs. 12 lakh per year.

Turnover below Rs. 12 lakh: Basic FSSAI Registration (Form A). Turnover Rs. 12 lakh to Rs. 20 crore: State FSSAI Licence (Form B).

**GST Registration**

If your annual turnover from selling goods exceeds Rs. 40 lakh (Rs. 20 lakh for services), you must register for Goods and Services Tax at gst.gov .in, free of cost. Voluntary registration is available even below the threshold and helps you claim input tax credits, appear credible to suppliers and banks, and participate in government tenders.

**Udyam Registration — For Micro and Small Businesses**

Any person running a micro, small, or medium enterprise (MSME) can register at udyamregistration.gov.in for free, using only their Aadhaar and PAN Card

Remember: Keep one file with all your licences, registration certificates, and renewal receipts. When a government inspector visits, showing these documents immediately can avoid unnecessary harassment. If an inspector asks for a bribe, note their name and badge number and report to the Lokayukta helpline.

Helpline / Where to Go: Karnataka Shops Act: Nearest District Labour Office | FSSAI: fssai.gov.in | Udyam: udyamregistration.gov.in | GST: gst.gov.in | Consumer Helpline: 1915 | Lokayukta (Anti-Corruption): 1064

## ೧೦. ಅಂಗಡಿ ಮತ್ತು ಸಣ್ಣ ವ್ಯಾಪಾರಕ್ಕೆ ನೋಂದಣಿ ಮತ್ತು ಪರವಾನಗಿ

ಸರಿಯಾದ ನೋಂದಣಿ ಮತ್ತು ಪರವಾನಗಿ ಇಲ್ಲದೆ ವ್ಯಾಪಾರ ನಡೆಸಿದರೆ ದಂಡ, ಬಂದ್, ಅಥವಾ ಬಂಧನಕ್ಕೂ ಕಾರಣವಾಗಬಹುದು. ನೋಂದಾಯಿಸಿಕೊಂಡರೆ ಸರ್ಕಾರಿ ಸಾಲ, ಸಬ್ಸಿಡಿ ಮತ್ತು ಕಾನೂನಿನ ರಕ್ಷಣೆ ದೊರೆಯುತ್ತದೆ.

**ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ, ೧೯೬೧**

ಕರ್ನಾಟಕದಲ್ಲಿ ಎಲ್ಲ ಅಂಗಡಿ, ಹೋಟೆಲ್, ರೆಸ್ಟೋರೆಂಟ್, ಕಚೇರಿ ತೆರೆದ ೩೦ ದಿನದೊಳಗೆ ನೋಂದಾಯಿಸಿಕೊಳ್ಳಬೇಕು. ನೋಂದಣಿ ಪ್ರಮಾಣಪತ್ರ ಅಂಗಡಿ ಪ್ರವೇಶದ್ವಾರದಲ್ಲಿ ಕಾಣಿಸುವಂತೆ ಇಡಬೇಕು.

· ಈ ಕಾಯ್ದೆ ಕಾರ್ಮಿಕರನ್ನೂ ರಕ್ಷಿಸುತ್ತದೆ: ದಿನಕ್ಕೆ ಗರಿಷ್ಠ ೯ ಗಂಟೆ, ವಾರಕ್ಕೆ ೪೮ ಗಂಟೆ ಕೆಲಸ. ವಾರದಲ್ಲಿ ಒಂದು ದಿನ ರಜೆ.

**FSSAI ಪರವಾನಗಿ — ಆಹಾರ ವ್ಯಾಪಾರಕ್ಕೆ ಕಡ್ಡಾಯ**

ಆಹಾರ ತಯಾರಿ, ಮಾರಾಟ, ಸಾಗಣೆ ಯಾವ ರೀತಿಯಾದರೂ ಮಾಡುತ್ತಿದ್ದರೆ FSSAI ಪರವಾನಗಿ ಕಡ್ಡಾಯ — ಕಿರಾಣಿ ಅಂಗಡಿ, ಚಹಾ ಅಂಗಡಿ, ಹೋಟೆಲ್, ಮನೆಯ ಅಡಿಗೆ ವ್ಯಾಪಾರ ಸೇರಿ.

· ವಾರ್ಷಿಕ ವಹಿವಾಟು ₹೧೨ ಲಕ್ಷಕ್ಕಿಂತ ಕಡಿಮೆ: ಮೂಲ ನೋಂದಣಿ (Form A).
· ₹೧೨ ಲಕ್ಷದಿಂದ ₹೨೦ ಕೋಟಿ: ರಾಜ್ಯ FSSAI ಪರವಾನಗಿ (Form B).
· FSSAI ಪರವಾನಗಿ ಇಲ್ಲದೆ ಆಹಾರ ಮಾರಿದರೆ: ₹೫ ಲಕ್ಷ ದಂಡ.

**GST ನೋಂದಣಿ**

ಸರಕು ಮಾರಾಟದ ವಾರ್ಷಿಕ ವಹಿವಾಟು ₹೪೦ ಲಕ್ಷ ಮೀರಿದರೆ (ಸೇವೆಗೆ ₹೨೦ ಲಕ್ಷ) GST ನೋಂದಣಿ ಕಡ್ಡಾಯ. gst.gov.in ನಲ್ಲಿ ಉಚಿತ ನೋಂದಣಿ ಮಾಡಿ.

**ಉದ್ಯಮ ನೋಂದಣಿ — ಸಣ್ಣ ವ್ಯಾಪಾರಕ್ಕೆ**

udyamregistration.gov.in ನಲ್ಲಿ ಆಧಾರ್ ಮತ್ತು PAN ಮೂಲಕ ಉಚಿತ ನೋಂದಣಿ ಮಾಡಬಹುದು. ಪ್ರಯೋಜನಗಳು:

· ಕಡಿಮೆ ಬಡ್ಡಿ ದರದ ಸಾಲ; ವಿದ್ಯುತ್ ಸಬ್ಸಿಡಿ.
· ಖರೀದಿದಾರ ೪೫ ದಿನದೊಳಗೆ ಪಾವತಿ ಮಾಡದಿದ್ದರೆ MSME ಕಾಯ್ದೆ ಅಡಿ ಕ್ರಮ ತೆಗೆದುಕೊಳ್ಳಬಹುದು.
· ಸರ್ಕಾರಿ ಟೆಂಡರ್‌ಗಳಲ್ಲಿ ಆದ್ಯತೆ.

**ಸ್ಥಳೀಯ ಸಂಸ್ಥೆಯ ವ್ಯಾಪಾರ ಪರವಾನಗಿ**

ಗ್ರಾಮ ಪಂಚಾಯಿತಿ ಅಥವಾ ಪುರಸಭೆ ವಾರ್ಷಿಕ ವ್ಯಾಪಾರ ಪರವಾನಗಿ ನೀಡುತ್ತದೆ. ಇದಿಲ್ಲದೆ ಅಂಗಡಿ ಮುಚ್ಚಿಸಬಹುದು ಅಥವಾ ದಂಡ ವಿಧಿಸಬಹುದು.

ಎಲ್ಲ ಪರವಾನಗಿ, ನೋಂದಣಿ ಪ್ರಮಾಣಪತ್ರ ಒಂದೇ ಕಡತದಲ್ಲಿ ಇಡಿ. ಅಧಿಕಾರಿ ಲಂಚ ಕೇಳಿದರೆ ಅವರ ಹೆಸರು ಮತ್ತು ಬ್ಯಾಡ್ಜ್ ಸಂಖ್ಯೆ ಬರೆದುಕೊಂಡು ಲೋಕಾಯುಕ್ತಕ್ಕೆ ತಿಳಿಸಿ.

ಕರ್ನಾಟಕ ಅಂಗಡಿ ಕಾಯ್ದೆ: ಜಿಲ್ಲಾ ಕಾರ್ಮಿಕ ಕಚೇರಿ | FSSAI: fssai.gov.in | GST: gst.gov.in | ಲೋಕಾಯುಕ್ತ (ಭ್ರಷ್ಟಾಚಾರ ವಿರೋಧಿ): 1064

## Legal Services Clinic

The Legal Services Clinic at Presidency School of Law operates under the Bengaluru Rural District Legal Services Authority. It functions as a bridge between the community and the justice system, training students in practical advocacy. The clinic currently runs two centers (on campus and in Rajanukunte Village) providing free legal advice, awareness drives, and dispute-resolution assistance to vulnerable groups. Its vision is to ensure access to justice for all and empower marginalized communities through legal knowledge and service.

The Presidency School of Law's Legal Aid Clinic conducted four outreach events (two in late 2025 and two in early 2026) in coordination with the Bengaluru Rural DLSA. These pro bono initiatives – including rural legal awareness drives, a high-school legal literacy program, and a three-day rural camp – reached about 240 community members and engaged ~80 law student volunteers. Together they provided free legal assistance and guidance (helping citizens obtain documents and understand rights) and generated roughly 13 case referrals for further aid. Collectively, these efforts advanced access to justice and legal empowerment for vulnerable groups in line with our clinic's mandate

## ಕಾನೂನು ಸೇವಾ ಚಿಕಿತ್ಸಾಲಯ

ಪ್ರೆಸಿಡೆನ್ಸಿ ಸ್ಕೂಲ್ ಆಫ್ ಲಾ ದಲ್ಲಿರುವ ಕಾನೂನು ಸೇವಾ ಚಿಕಿತ್ಸಾಲಯವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದು ಸಮಾಜ ಮತ್ತು ನ್ಯಾಯ ವ್ಯವಸ್ಥೆಯ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಾ, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ನ್ಯಾಯ ಸಹಾಯ ತರಬೇತಿ ನೀಡುತ್ತದೆ. ಚಿಕಿತ್ಸಾಲಯವು ಪ್ರಸ್ತುತ ಎರಡು ಕೇಂದ್ರಗಳನ್ನು ನಡೆಸುತ್ತಿದೆ ಒಂದು ಕ್ಯಾಂಪಸ್‌ನಲ್ಲಿ, ಇನ್ನೊಂದು ರಾಜಾನುಕುಂಟೆ ಗ್ರಾಮದಲ್ಲಿ. ಇಲ್ಲಿ ಅಸಹಾಯಕ ಸಮುದಾಯಗಳಿಗೆ ಉಚಿತ ಕಾನೂನು ಸಲಹೆ, ಜಾಗೃತಿ ಕಾರ್ಯಕ್ರಮಗಳು ಮತ್ತು ವಿವಾದ ಪರಿಹಾರ ಸಹಾಯ ನೀಡಲಾಗುತ್ತದೆ. ಎಲ್ಲರಿಗೂ ನ್ಯಾಯ ದೊರಕಲಿ ಮತ್ತು ಅಂಚಿನಲ್ಲಿರುವ ಸಮುದಾಯಗಳು ಕಾನೂನಿನ ಮೂಲಕ ಸಬಲರಾಗಲಿ ಎಂಬುದು ಈ ಚಿಕಿತ್ಸಾಲಯದ ದೃಷ್ಟಿ.

ಪ್ರೆಸಿಡೆನ್ಸಿ ಸ್ಕೂಲ್ ಆಫ್ ಲಾ ದ ಕಾನೂನು ಸಹಾಯ ಚಿಕಿತ್ಸಾಲಯ, ಬೆಂಗಳೂರು ಗ್ರಾಮಾಂತರ DLSA ಸಹಯೋಗದಲ್ಲಿ ನಾಲ್ಕು ಸಮುದಾಯ ಸೇವಾ ಕಾರ್ಯಕ್ರಮಗಳನ್ನು ನಡೆಸಿತು ೨೦೨೫ ರ ಕೊನೆಯಲ್ಲಿ ಎರಡು ಮತ್ತು ೨೦೨೬ ರ ಆರಂಭದಲ್ಲಿ ಎರಡು. ಗ್ರಾಮೀಣ ಕಾನೂನು ಜಾಗೃತಿ ಕಾರ್ಯಕ್ರಮಗಳು, ಪ್ರೌಢಶಾಲೆ ಮಕ್ಕಳಿಗೆ ಕಾನೂನು ಸಾಕ್ಷರತಾ ಕಾರ್ಯಕ್ರಮ ಮತ್ತು ಮೂರು ದಿನಗಳ ಗ್ರಾಮೀಣ ಶಿಬಿರ ಸೇರಿದಂತೆ ಈ ನಿಃಶುಲ್ಕ ಉಪಕ್ರಮಗಳು ಸುಮಾರು ೨೪೦ ಸಮುದಾಯ ಸದಸ್ಯರನ್ನು ತಲುಪಿದವು ಮತ್ತು ಸುಮಾರು ೮೦ ಕಾನೂನು ವಿದ್ಯಾರ್ಥಿ ಸ್ವಯಂಸೇವಕರು ಪಾಲ್ಗೊಂಡರು. ನಾಗರಿಕರಿಗೆ ದಾಖಲೆ ಪಡೆಯಲು ಮತ್ತು ತಮ್ಮ ಹಕ್ಕುಗಳನ್ನು ಅರ್ಥ ಮಾಡಿಕೊಳ್ಳಲು ಉಚಿತ ಕಾನೂನು ಸಹಾಯ ನೀಡಲಾಯಿತು ಮತ್ತು ಸುಮಾರು ೧೩ ಪ್ರಕರಣಗಳನ್ನು ಮುಂದಿನ ಸಹಾಯಕ್ಕಾಗಿ ರವಾನಿಸಲಾಯಿತು. ಈ ಎಲ್ಲ ಪ್ರಯತ್ನಗಳು ಚಿಕಿತ್ಸಾಲಯದ ಉದ್ದೇಶಕ್ಕೆ ಅನುಗುಣವಾಗಿ ಅಸಹಾಯಕ ಸಮುದಾಯಗಳಲ್ಲಿ ನ್ಯಾಯ ಲಭ್ಯತೆ ಮತ್ತು ಕಾನೂನು ಸಬಲೀಕರಣವನ್ನು ಮುನ್ನಡೆಸಿದವು.








ಕಾನೂನು ಸೇವಾ ಕೇಂದ್ರ






PRESIDENCY UNIVERSITY



## Dr. VIDYA SHANKAR SHETTY
PRO - VICE CHANCELLOR

## Prof. Dr. SAROJ SHARMA
DEAN - PRESIDENCY SCHOOL OF LAW

## DR. G. M. MAMATHA
HOD, SCHOOL OF LAW

---

FACULTY CO-ORDINATORS

**DR. DIGANTA ROY**
ASSISTANT PROFESSOR

**MD. ZAFAR SADIQUE**
ASSISTANT PROFESSOR

STUDENT CO-ORDINATORS

**JYOSSHIKA LAHARI**
STUDENT

**SUHAS YADAV**
STUDENT

---


## LEGAL SERVICES CLINIC (OFF-CAMPUS)
1st Floor, Sangeetha Mobile, near Police Quarters, Doddaballapur Main Road, Rajanukunte, Bangalore - 560064.

## PRESIDENCY UNIVERSITY (ON-CAMPUS)
Itgalpur Main Road,
Rajanukunte, Yelahanka,
Bengaluru-560064

## CONTACT US
+91 96329 03882, +91 81236 50191
legalaidcell_sol@presidencyuniversity.in

# PREAMBLE

**WE, THE PEOPLE OF INDIA, having solemnly resolved to constitute India into a [SOVEREIGN SOCIALIST SECULAR DEMOCRATIC REPUBLIC] and to secure to all its citizens:**

**JUSTICE, social, economic and political;**
**LIBERTY of thought, expression, belief, faith and worship;**
**EQUALITY of status and of opportunity;**
**and to promote among them all**

**FRATERNITY assuring the dignity of the individual and the [unity and integrity of the Nation];**

**IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.**

# ಪ್ರಸ್ತಾವನೆ

**ಭಾರತದ ಜನಗಳಾದ ನಾವು ಭಾರತವನ್ನು ಒಂದು (ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ) ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;**

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ;**
**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ;**
**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**
**ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು) ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;**
**ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**